**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ: 6X1 = 6**

**1. 'ಸೊಗಸಾಗಿ' ಪದವು ಈ ಅವ್ಯಯಕ್ಕೆ ಸೇರಿದೆ;**
(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ (ಸಿ) ಕ್ರಿಯಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ
**ಉತ್ತರ : (ಎ) ಸಾಮಾನ್ಯಾರ್ಥಕಾವ್ಯಯ**

**2. ದ್ವಿತೀಯಾ ವಿಭಕ್ತಿಯ ಕಾರಕಾರ್ಥ:**
(ಎ) ಅಧಿಕರಣ (ಬಿ) ಕರಣಾರ್ಥ (ಸಿ) ಕರ್ಮಾರ್ಥ (ಡಿ) ಸಂಬಂಧ
**ಉತ್ತರ : (ಸಿ) ಕರ್ಮಾರ್ಥ**

**3. 'ವನೌಷಧಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;**
(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ (ಸಿ) ಜಶ್ತ್ವ ಸಂಧಿ (ಡಿ) ವೃದ್ಧಿ ಸಂಧಿ
**ಉತ್ತರ : (ಡಿ) ವೃದ್ಧಿ ಸಂಧಿ**

**4. 'ನೆಯ್ದುವಸ್ತ್ರ' ಪದವು ಈ ಸಮಾಸಕ್ಕೆ ಸೇರಿದೆ;**
(ಎ) ಅಂಶಿ ಸಮಾಸ (ಬಿ) ಕ್ರಿಯಾ ಸಮಾಸ (ಸಿ) ಗಮಕ ಸಮಾಸ (ಡಿ) ತತ್ಪುರುಷ ಸಮಾಸ
**ಉತ್ತರ : (ಸಿ) ಗಮಕ ಸಮಾಸ**

**5. ಸ್ವತಂತ್ರವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು;**
(ಎ) ಮಿಶ್ರವಾಕ್ಯ (ಬಿ) ಸಾಮಾನ್ಯಾವಾಕ್ಯ (ಸಿ) ಸ್ವತಂತ್ರವಾಕ್ಯ (ಡಿ) ಸಂಯೋಜಿತವಾಕ್ಯ
**ಉತ್ತರ : (ಡಿ) ಸಂಯೋಜಿತವಾಕ್ಯ**

**6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು:**
(ಎ) ವಾಕ್ಯವೇಷ್ಟನ ಚಿಹ್ನೆ (ಬಿ) ಉದ್ಧರಣ ಚಿಹ್ನೆ (ಸಿ) ಆವರಣ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ
**ಉತ್ತರ : (ಬಿ) ಉದ್ಧರಣ ಚಿಹ್ನೆ**

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4X1=4**

**7. ಕಳುವ್ಯಾರೆ : ಕಳುಹಿಸಿದ್ದಾರೆ : : ಸಕ್ಕಾರಿ** : ಸಕ್ಕರೆ.

**8. ಅರ್ಕ : ಎಕ್ಕ : : ಕುಠಾರ** : ಕೊಡಲಿ.
**9. ಹಾಡಲಿ : ವಿಧ್ಯರ್ಥಕ : : ಹಾಡನು** : ನಿಷೇಧಾರ್ಥಕ,

**10. ಕೆನೆಮೊಸರು : ಜೋಡುನುಡಿ : : ಮೊಟ್ಟಮೊದಲು** : ದ್ವಿರುಕ್ತಿ.

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 7X1=7**
**11. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?**
ನೆಲ್ಲನ್‌ರವರ ಮೂರ್ತಿಯಿರುವ ಸ್ಥಳದ ಹೆಸರು ಲಂಡನ್ ನಗರದ 'ಟ್ರಾಫಲ್ಗಾರ್ ಸ್ಕ್ವೇರ್'.

**12. ಉಪದೇಶ ಯಾರ ಕಿವಿಗೆ ನಾಟುವುದಿಲ್ಲ?**
ಉಪದೇಶವು ಅಹಂಕಾರ ತುಂಬಿದ ರಾಜಮನೆತನದಲ್ಲಿ ಹುಟ್ಟಿದವರ ಕಿವಿಗೆ ನಾಟುವುದಿಲ್ಲ.

**13. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನೆಂದು ಹೇಳಿದನು?**
ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ "ಇವನು ಯಾವಾಗ ಋಷಿಗಳನ್ನು ಕಾಣುತ್ತಾನೆಯೋ ಅಂದು ತಪಸ್ಸಿಗೆ ಹೊರಡುತ್ತಾನೆ" ಎಂದು ಹೇಳಿದನು.

**14. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**
ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಬೇಕಾದ ಔಷಧ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**15. ಕವಿ ಕುವೆಂಪುರವರು ನೋಡಿದ ಅಡಕೆಯ ತೋಟ ಎಲ್ಲಿದೆ?**
ಕವಿ ಕುವೆಂಪುರವರು ನೋಡಿದ ಅಡಕೆಯ ತೋಟವು ಬನದ ಅಂಚಿನಲ್ಲಿದೆ.

**16 . ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು?**
ದ್ರೋಣನು ತನಗೆ ಬಂದ ಬಡತನವನ್ನು ಹೋಗಲಾಡಿಸಿಕೊಳ್ಳುವ ಉದ್ದೇಶದಿಂದ ದ್ರವ್ಯಾರ್ಥಿಯಾಗಿ ಪರಶುರಾಮರ ಬಳಿಗೆ ಬಂದನು.

**17. ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?**
ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರು 'ದ್ರಾವಿಡ ಕಳಗಂ'.

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 10X2=20**

**18. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**
ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಧೈರ್ಯವನ್ನು ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.

**19. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ತಿಳಿಸಿ.**
ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. "ಅಯ್ಯೋ, ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ" ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿಹಿಗ್ಗಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೆ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**
ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ. ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಡಲಾಯಿತು. ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಲು ಆರಂಭ ಮಾಡಿದವು. ಇವರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ, 2. ವೈದ್ಯ ಸಹಾಯ, 3. ವಿದ್ಯಾ ಪ್ರಚಾರ, 4. ನೀರಿನ ಸೌಕರ್ಯ, 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

**21. ಅರಸ ವೃಷಭಾಂಕನು ಯಶೋಭದ್ರೆಯ ಮನೆಗೆ ಕಾರಣವೇನು?**
ಒಂದು ದಿನ ರತ್ನದೀಪದಿಂದ ಬಂದ ವ್ಯಾಪಾರಿಯೊಬ್ಬನು ಲಕ್ಷ ದೀನಾರುಗಳ ಬೆಲೆಯುಳ್ಳ ಸರ್ವರತ್ನ ಕಂಬಳಿಗಳನ್ನು ತಂದು ಉಜ್ಜೇನಿ ಆರಸನಾದ ವೃಷಭಾಂಕನಿಗೆ ತೋರಿಸಿದಾಗ ಅವನು ಅದರ ಬೆಲೆಯನ್ನು ಕೇಳಿ, ಕೊಳ್ಳಲಾಗದೆ ಹಿಂದಕ್ಕೆ ಕಳುಹಿಸಿದನು. ಆಗ ಆ ವ್ಯಾಪಾರಿಯು ಆ ರತ್ನಕಂಬಳಿಗಳನ್ನು ಯಶೋಭದ್ರೆಗೆ ತೋರಿಸಿದಾಗ ಅವಳು ಲಕ್ಷ ದೀನಾರುಗಳನ್ನು ಕೊಟ್ಟು ಕೊಂಡುಕೊಂಡು, ಅದನ್ನು ಮೂವತ್ತೆರಡು ತುಂಡುಗಳಾಗಿ ಮಾಡಿ, ತನ್ನ ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವಳ ಸೊಸೆಯರು ಅವುಗಳನ್ನು ತಮ್ಮ ಪಾದರಕ್ಷೆಗಳಲ್ಲಿ.
ಹಾಕಿಕೊಂಡರು. ಇದನ್ನು ಕೇಳಿ ಉಜ್ಜೇನಿ ಅರಸ ವೃಷಭಾಂಕನು ಆಶ್ಚರ್ಯಗೊಂಡು, ಅವರ ಐಶ್ವರ್ಯವನ್ನು ನೋಡುವುದಕ್ಕಾಗಿ ಯಶೋಭದ್ರೆ ಮನೆಗೆ ಬಂದನು.

**22. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**
"ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ನನ್ನ ನೂರು ಜನ ತಮ್ಮಂದಿರನ್ನು ಪಾರ್ಥ-ಭೀಮರು ಕೊಂದುಹಾಕಿದ್ದಾರೆ. ಆದ್ದರಿಂದ ಅವರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಂದು. ನನ್ನ ದುಃಖವು ತಣ್ಣಗಾದಾಗಬೇಕಾದರೆ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುವೆನು" ಎನ್ನುವುದು ಪಾರ್ಥಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

**23. ಪರಶುರಾಮನು ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**
ಪರಶುರಾಮನು ತನ್ನ ಬಳಿಯಲ್ಲಿದ್ದ ಆಭರಣಗಳನ್ನು ಬೇಡಿದವರಿಗೆ ಕೊಟ್ಟಿದ್ದನು. ಭೂಮಂಡಲವನ್ನು ಗುರುವಿಗೆ ಕೊಟ್ಟಿದ್ದನು. ಈಗ ಅವನ ಬಳಿ ಒಂದು ಅಡಕೆಯೂ ಇರಲಿಲ್ಲ, ಚಿನ್ನದ ಪಾತ್ರೆಯೂ ಇರಲಿಲ್ಲ. ಆದುದರಿಂದ ಪರಶುರಾಮನು ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ **ಅರ್ಘ್ಯವನ್ನು** (ನೀರನ್ನು) ಕೊಟ್ಟನು.

**24. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**
ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೆಯಗಳಿಗನುಸಾರವಾಗಿ ಗಾಂಧೀಜಿಯವರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. ಕೃತಿ ಗಾಂಧೀಜಿಯವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು. ಈ ಪುಸ್ತಕವನ್ನು ಗಾಂಧೀಜಿಯವರು 'ಸರ್ವೋದಯ' ಎಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದರು. ಇದು 'ಅನ್‌ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿಯವರ ಮೇಲೆ ಬೀರಿದ ಪರಿಣಾಮವಾಗಿದೆ.

**25. ಬಾಲಕ ಭಗತ್ ಸಿಂಗ್ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಲು ಕಾರಣವೇನು?**
"ಎಲ್ಲ ಮಕ್ಕಳು ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು. ಆದರೆ ಹನ್ನೆರಡು ವರ್ಷದ ಬಾಲಕ **ಭಗತ್ ಸಿಂಗ್** ಮಾತ್ರ ಮನೆಗೆ ಬಂದಿರಲಿಲ್ಲ. ಅವನ ತಂದೆತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಗಿತ್ತು. ತಡವಾಗಿ ಬಾಲಕ **ಭಗತ್ ಸಿಂಗ್** ಮನೆಯೊಳಗೆ ಕಾಲಿಟ್ಟನು. ಅವನ ತಂಗಿ 'ವೀರಾಜಿ ಬಂದ... ವೀರಾಜಿ ಬಂದ...' ಎಂದು ಕೂಗಿಕೊಂಡಳು. ಬಾಲಕ ಭಗತ್‌ಸಿಂಗ್‌ನ ತಾಯಿಯು ಅವನನ್ನು ಬಿಗಿಯಾಗಿ ಅಪ್ಪಿದಳು. ಆಗ ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯತೊಡಗಿತ್ತು.

**26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**
ಋತುಗಳ ರಾಜನಾದ ವಸಂತನ ಆಗಮನದ ಸಮಯದಲ್ಲಿ ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಸುರಾದ ಎಲೆಗಳು ಮತ್ತು ಹಣ್ಣುಗಳಿಂದ ಮೈತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಸ್ವಚ್ಛಂದವಾಗಿ ಹಾರಾಡುತ್ತಿವೆ. ಮಾವಿನ ಚಿಗುರನ್ನು ತಿಂದು ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ವಸಂತನ ಆಗಮನದ ಹಿನ್ನೆಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ. ಮಲ್ಲಿಗೆಯ ಹೂವುಗಳು ಅರಳಿ ಮುಗುಳು ನಗೆ ಬೀರುತ್ತಿವೆ. ಮನೆಯ ಮುಂದಿನ ಹೊಳೆಯುವ ರಂಗೋಲಿಯಲ್ಲಿ ಬಾಲರವಿಯು ಥಳಥಳಿಸುತ್ತಿದ್ದಾನೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?**
ಪಶ್ಚಿಮ ಘಟ್ಟದ ಕಾಡುಗಳಲ್ಲಿ ದೊರೆಯುವ 'ತೊಡಕಲು ಕುಡಿ' ಎನ್ನುವ ಬೂದು ಬಣ್ಣದ ಗಿಡದ ಎಳೆಚಿಗುರನ್ನು ಸಂಗ್ರಹಿಸಿ, ಒಣಗಿಸಿ, ಒಣಗಿದ ಕುಡಿಯನ್ನು ಎಣ್ಣೆಯಲ್ಲಿ ಅದ್ದಿ, ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಮಲೆನಾಡಿನಲ್ಲಿ ಕಾಡುಗಿಡದ ಎಳೆಚಿಗುರನ್ನು ದೀಪದ ಕುಡಿಯಾಗಿ ಬಳಸಲಾಗುತ್ತಿತ್ತು. ಅಡಿಕೆ, ತೆಂಗಿನ ತೋಟ, ಹಳ್ಳದಂಚುಗಳಲ್ಲಿದ್ದ ನಾಗಸಂಪಿಗೆ ಮರದ ಬೀಜಗಳನ್ನು ಸಂಗ್ರಹಿಸಿ, ಅವುಗಳನ್ನು ಕುಟ್ಟಿ, ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿದ್ದ ಜವಾರಿ ಹತ್ತಿ ಗಿಡಗಳ ಹತ್ತಿಯನ್ನು ದೀಪಕ್ಕೆ ಬಳಸಲಾಗುತ್ತಿತ್ತು. ಹೀಗೆ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು.

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **2X3=6**
**28. ವಿ. ಕೃ. ಗೋಕಾಕ್**

'ವಿನಾಯಕ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು ಕ್ರಿ. ಶ. 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ನವ್ಯಕಾವ್ಯ ಪರಂಪರೆಯ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಇವರು ಸಮುದ್ರದಾಚೆಯಿಂದ, ಜೀವನಪಾಠಗಳು, ಭಾರತ ಸಿಂಧು ರಶ್ಮಿ, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ದ್ಯಾವಾಪೃಥಿವೀ, ಸಮರಸವೇ ಜೀವನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ 'ಪದ್ಮಶ್ರೀ ಪ್ರಶಸ್ತಿ'ಯನ್ನು, ಸಮಗ್ರ ಸಾಹಿತ್ಯಕ್ಕಾಗಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು', 'ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು, ಕರ್ನಾಟಕ ವಿಶ್ವವಿದ್ಯಾಲಯದ 'ಗೌರವ ಡಾಕ್ಟರೇಟ್ ಪದವಿ'ಯನ್ನು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ 'ಗೌರವ ಡಿ. ಲಿಟ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**29. ಕುವೆಂಪು**

'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕ್ರಿ. ಶ. 1904 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಪಕ್ಷಿಕಾಶಿ, ಕೊಳಲು, ಪಾಂಚಜನ್ಯ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮವಿಭೂಷಣ ಪ್ರಶಸ್ತಿಯನ್ನು, 'ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು, ಕರ್ನಾಟಕ ಸರ್ಕಾರದ ರಾಷ್ಟ್ರಕವಿ ಪ್ರಶಸ್ತಿಯನ್ನು, ಕರ್ನಾಟಕ ರತ್ನ ಪ್ರಶಸ್ತಿಯನ್ನು, ಪಂಪ ಪ್ರಶಸ್ತಿಯನ್ನು ಹಾಗೂ 'ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'ಗಳನ್ನು ನೀಡಿ ಗೌರವಿಸಲಾಗಿದೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1X3=3**

**30. ಕದಡಿದ ಸಲಿಲಂ ತಿಳಿವಂ**
**ದದೆ ತನ್ನಿಂ ತಾನೆ ತಿಳಿದ ದಶವದನಂಗಾ ।**

UUUU | UU _ | UU_ |
ಕದಡಿದ | ಸಲಿಲಂ | ತಿಳಿವಂ |

U _ | _ _ | UUUU | UUUU | _ _ |
ದದೆ ತ | ನ್ನಿಂತಾ | ನೆತಿಳಿದ | ದಶವದ | ನಂಗಾ |

ಈ ಮೇಲಿನ ಪದ್ಯವು ಮಾತ್ರಾಗಣದ 'ಕಂದ ಪದ್ಯ'ದಲ್ಲಿ ರಚಿತವಾಗಿದೆ.

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1X3=3**

**31. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

**ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.**

**ಲಕ್ಷಣ :** ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದರೆ ಅದು ಅರ್ಥಾಂತರನ್ಯಾಸ ಅಲಂಕಾರ.

**ಉಪಮೇಯ (ವಿಶೇಷ ವಾಕ್ಯ)** : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

**ಉಪಮಾನ ( ಸಾಮಾನ್ಯ ವಾಕ್ಯ) :** ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**ಸಮನ್ವಯ :** ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ "ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಈ ವಾಕ್ಯವು ಅರ್ಥಾಂತರನ್ಯಾಲಂಕಾರಕ್ಕೆ ಉದಾಹರಣೆಯಾಗಿದೆ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1X3=3**

**32. ದೇಶ ಸುತ್ತಿ ನೋಡು; ಕೋಶ ಓದಿ ನೋಡು.**

'ಗಾದೆಗಳು ವೇದಗಳಿಗೆ ಸಮಾನ' ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ದೇಶ ಸುತ್ತಿ ನೋಡು; ಕೋಶ ಓದಿ ನೋಡು'** ಎಂಬ ಗಾದೆಯೂ ಸಹ ಒಂದಾಗಿದೆ.

ಮಾನವನಿಗೆ ಲೋಕಜ್ಞಾನ ಬಹಳ ಮುಖ್ಯವಾದುದು ಎನ್ನುವುದನ್ನು ಈ ಗಾದೆಯು ತಿಳಿಸುತ್ತದೆ. ದೇಶ ಸುತ್ತುವುದರಿಂದ ಹಾಗೂ ಕೋಶ ಓದುವುದರಿಂದ ಲೋಕಜ್ಞಾನವು ಹೆಚ್ಚುತ್ತದೆ. ದೇಶವನ್ನು ಸುತ್ತಿದಾಗ ನಮಗೆ ಬೇರೆ ಬೇರೆ ರಾಜ್ಯದ ಜನರ ಸಂಸ್ಕೃತಿ, ಭಾಷೆ, ಆಚಾರ-ವಿಚಾರಗಳು, ಪದ್ಧತಿಗಳು, ಆಚರಣೆಗಳು, ನಂಬಿಕೆಗಳು ಮೊದಲಾದವುಗಳ ಅರಿವುಂಟಾಗುತ್ತದೆ. ದೇಶ ಸುತ್ತುವುದರಿಂದ ಅನುಭವ ಹೆಚ್ಚಾಗುತ್ತದೆ. ಇದರಿಂದ ನಮ್ಮ ಜ್ಞಾನವು ಬೆಳೆಯುತ್ತದೆ. ಆದರೆ ದೇಶ ಸುತ್ತುವುದು ಸುಲಭದ ಕೆಲಸವಲ್ಲ. ಇದಕ್ಕೆ ಸಮಯ, ತಾಳ್ಮೆ, ಕೈಯಲ್ಲಿ ಹಣ ಹಾಗೂ ಅಲ್ಲಿಯ ಭಾಷೆಗಳ ಅರಿವು ಇರಬೇಕಾಗುತ್ತದೆ. ಆದ್ದರಿಂದ ಅನುಭವಿಗಳು ಬರೆದ ಕೋಶಗಳನ್ನು ಓದುವುದರಿಂದಲೂ ಸಹ ಜ್ಞಾನಾರ್ಜನೆ ಮಾಡಬಹುದಾಗಿದೆ. ಕೋಶವನ್ನು ಒಂದೇ ಸ್ಥಳದಲ್ಲಿ ಕುಳಿತು ಓದಬಹುದಾಗಿದೆ. ಕೋಶಗಳನ್ನು ಓದುತ್ತಾ ಹೋದಂತೆ ನಮಗೆ ಅನೇಕ ದೇಶ ಸುತ್ತಿದಾಗ ಸಿಗುವ ಅನುಭವಗಳು ದೊರೆಯುತ್ತವೆ. ದೇಶ ಸುತ್ತಿ ನೋಡು; ಕೋಶ ಓದಿ ನೋಡು ಎನ್ನುವ ಗಾದೆಯು ಈ ಮಾತನ್ನು ಸಮರ್ಥಿಸುತ್ತದೆ.

**ಅಥವಾ**

**ಗಿಡವಾಗಿ ಬಗ್ಗದ್ದು, ಮರವಾಗಿ ಬಗೀತೆ**

'ಗಾದೆಗಳು ವೇದಗಳಿಗೆ ಸಮಾನ' ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ವದ ಗಾದೆಗಳಲ್ಲಿ 'ಗಿಡವಾಗಿ ಬಗ್ಗದ್ದು ಮರವಾಗಿ ಬಗೀತೆ' ಎಂಬ ಗಾದೆಯೂ ಸಹ ಒಂದಾಗಿದೆ.

**ಪ್ರಸ್ತುತ ಗಾದೆ 'ಗಿಡವಾಗಿ ಬಗ್ಗದ್ದು;** ಮರವಾಗಿ ಬಗೀತೆ' ಮನುಷ್ಯನ ಜೀವನ ಕ್ರಮಕ್ಕೆ ನೇರವಾಗಿ ಸಂಬಂಧಿಸಿದೆ. ಈ ಗಾದೆಯಲ್ಲಿ ಬಾಗುವುದು ಎಂದರೆ ದರ್ಪಕ್ಕೆ ಬಾಗಿ ನಡೆಯುವುದೆಂದಲ್ಲ. ವಿನಯದಿಂದ ತಿಳಿದವರೆದುರು ಬಾಗಿ, ಅವರಿಂದ ಮಾರ್ಗದರ್ಶನ ಹೊಂದಬೇಕು ಎಂಬ ಸಂಕೇತವಿದೆ. ಬಾಲ್ಯದಲ್ಲಿಯೇ ಮಗುವಿಗೆ ಒಳತು- ಕೆಡುಕುಗಳನ್ನು ವಿಭಜಿಸುವ, ಒಳಿತನ್ನೇ ಎಷ್ಟೇ ಕಷ್ಟವಾದರೂ ಅನುಸರಿಸುವ ಶಿಕ್ಷಣ ನೀಡುವುದು ಆಗತ್ಯ. ವಯಸ್ಸಿಗೆ ಬಂದ ಬಳಿಕ ಬಾಲ್ಯದಿಂದ ರೂಢಿಸಿಕೊಂಡಿರುವ ತಿಳಿವಳಿಕೆಗಳು ತಪ್ಪು ಎಂದು ತಿದ್ದಲು ಹೊರಟರೆ ಉಪಯೋಗವಾಗುವುದಿಲ್ಲ. ಪರಿಸ್ಥಿತಿಗಳೊಂದಿಗೆ ಹೊಂದಿಕೊಳ್ಳುವುದನ್ನು ಬಾಲ್ಯದಿಂದಲೂ ರೂಢಿಸಿಕೊಳ್ಳಬೇಕು ಸ್ವಾಭಿಮಾನವನ್ನು ಬಿಡಬಾರದು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6X3=18**

**33. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು,"**

**ಆಯ್ಕೆ :** ಪ್ರಸ್ತುತ ವಾಕ್ಯವನ್ನು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ಅನುವಾದಿಸಿರುವ 'ಕಾದಂಬರಿ' ಎನ್ನುವ ಕೃತಿಯಿಂದ ಆಯ್ದ, 'ಶುಕನಾಸನ ಉಪದೇಶ' ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :** ಕಾಶ್ಮೀರದ ಮಹಾರಾಜ ತಾರಾಪೀಡನ ಸುಪುತ್ರನಾದ ಚಂದ್ರಾಪೀಡನು ಯುವರಾಜ ಪಟ್ಟಾಭಿಷೇಕದ ಪೂರ್ವಭಾವಿಯಾಗಿ ಮಹಾಮಂತ್ರಿ ಶುಕನಾಸನನ್ನು ಸಂದರ್ಶಿಸಲು ಬಂದ ಸಂದರ್ಭದಲ್ಲಿ ಈ ಮಾತು ಬಂದಿದೆ. ಮಹಾಮಂತ್ರಿ ಶುಕನಾಸನು ರಾಜಪುತ್ರ ಚಂದ್ರಾಪೀಡನಿಗೆ ಗುರೂಪದೇಶದ ಮಹತ್ತ್ವವನ್ನು ಕುರಿತು ಉಪದೇಶಿಸುವಾಗ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :** "ಗುರೂಪದೇಶವು ಮಾನವರಿಗೆ ಪಕ್ವತೆಯನ್ನು ನೀಡುತ್ತದೆ" ಎನ್ನುವುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**34. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"**

**ಆಯ್ಕೆ :** ಈ ವಾಕ್ಯವನ್ನು 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದ ಭಾಗವಾಗಿ ಶ್ರೀ ಡಿ. ಎಸ್. ಜಯಪ್ಪಗೌಡ ಅವರು ರಚಿಸಿದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಸಂಶೋಧನಾ ಗ್ರಂಥದಿಂದ ಆಯ್ದ 'ಸರ್. ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು ಈ ಮಾತುಗಳನ್ನು ಹೇಳುತ್ತಾರೆ.
**ಸ್ವಾರಸ್ಯ :** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿಲೇಸು' ಎಂದು ತಿಳಿದು ಕಾರ್ಯಪ್ರವೃತ್ತರಾಗಿ ಆದರ್ಶಪ್ರಾಯರಾಗಿದ್ದರು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ವಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**35. "ಯಾರದು, ಒಳಗೆ? ಬಾಗಿಲು ತೆಗೆಯಿರಿ"**

**ಆಯ್ಕೆ :** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕರ್ ಅವರು ರಚಿಸಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :** ಮುದುಕಿಯು ವಾಸವಾಗಿದ್ದ ದೇಶದ ಸೈನಿಕರು ತಮ್ಮ ಶತ್ರು ದೇಶದ ಸೈನಿಕನು ವಿಮಾನ ಸ್ಫೋಟದಿಂದ ಕೆಳಗೆ ಬಿದ್ದು, ಮುದುಕಿಯ ಈ ಮನೆಯಲ್ಲಿ ಆಶ್ರಯ ಪಡೆದಿರಬಹುದು ಎನ್ನುವ ಸಂದೇಹದಿಂದ ಹುಡುಕುತ್ತ ಬಂದು, ಮನೆಯ ಬಾಗಿಲನ್ನು ಬಡಿಯುವ ಸಂದರ್ಭದಲ್ಲಿ ಆ ದೇಶದ ಸೈನಿಕರು ಅಧಿಕಾರ ವಾಣಿಯಿಂದ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :** ಮುದುಕಿಯ ಮನೆಯಲ್ಲಿ ಶತ್ರು ದೇಶದ ವಿಮಾನ ಸ್ಫೋಟದಿಂದ ಕೆಳಗೆ ಬಿದ್ದ ಸೈನಿಕನು ಆಶ್ರಯವನ್ನು ಪಡೆದಿರಬಹುದೆಂದು ಸಂದೇಹಪಟ್ಟು, ಹುಡುಕಲು ಬಂದಾಗ ಹೇಳುವ ಸೈನಿಕರ ಅಧಿಕಾರವಾಣಿಯು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**36. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"**

**ಆಯ್ಕೆ :** ಈ ವಾಕ್ಯವನ್ನು 'ಕುಮಾರವ್ಯಾಸ' ಎಂದು ಪ್ರಸಿದ್ಧರಾದ ಗದುಗಿನ ನಾರಣಪ್ಪ ಅವರು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದ ಉದ್ಯೋಗ ಪರ್ವದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು'ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುತ್ತ, ಅವನ ಜನ್ಮ ರಹಸ್ಯವನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.
**ಸ್ವಾರಸ್ಯ :** ಕೃಷ್ಣನು ಕರ್ಣನನ್ನು ಕುರಿತು "ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು" ಎಂದು ಆತನ ಜನ್ಮ ರಹಸ್ಯವನ್ನು ಹೇಳುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

37. “ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ”

**ಆಯ್ಕೆ :-** ಈ ವಾಕ್ಯವನ್ನು ಪ್ರೊ. ಹಂಪನಾಗರಾಜಯ್ಯ ಅವರು ಸಂಪಾದಿಸಿರುವ 'ರನ್ನ ಸಂಪುಟ'ದ ಮಹಾಕವಿ ರನ್ನ ಅವರ 'ಸಾಹಸಭೀಮ ವಿಜಯಂ' ಮಹಾಕಾವ್ಯದ ಪಂಚಮಾಶ್ವಾಸದಿಂದ ಆಯ್ದ 'ಛಲಮನೆ ಮೆಜೆವೆಂ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :-** ಕುರುಕ್ಷೇತ್ರಯುದ್ಧದ ಸಮಯದಲ್ಲಿ ಶರಶಯ್ಯೆಯಲ್ಲಿ ಮಲಗಿರುವ ಭೀಷ್ಮರನ್ನು ಕಾಣಲು ಬಂದ ಸಂದರ್ಭದಲ್ಲಿ ದುರ್ಯೋಧನನು ಈ ಮಾತನ್ನು ಭೀಷ್ಮನಿಗೆ ಹೇಳುತ್ತಾನೆ.
**ಸ್ವಾರಸ್ಯ :-** ದುರ್ಯೋಧನನು ಮುಗುಳು ನಗೆಬೀರಿ "ಅಜ್ಜ, ನಿಮಗೆ ವಂದಿಸಿ, ಆಶೀರ್ವಾದವನ್ನು ಪಡೆದು ಹೋಗುವ ನಿರ್ಧಾರದಿಂದ ಬಂದೆನು. ಏನು ಶತ್ರುಗಳೊಡನೆ ಸಂಧಿಯ ಒಪ್ಪಂದವನ್ನು ಮಾಡಿಕೊಳ್ಳಲೆಂದು ಬಂದಿರುವೆನೇ? ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿ" ಎಂದು ಕೇಳುವುದು ಅವನಲ್ಲಿ ಅಡಗಿರುವ ವೀರತನವನ್ನು ಅಭಿವ್ಯಕ್ತಪಡಿಸುತ್ತದೆ.

**38. "ಉರ್ವಿಯೊಳ್ ಕೌಸಲ್ಯ ಪಡೆದ ಕುವರಂ ರಾಮ"**

**ಆಯ್ಕೆ:** ಈ ವಾಕ್ಯವನ್ನು ದೇವುಡು ನರಸಿಂಹ ಶಾಸ್ತ್ರಿ ಮತ್ತು ಬಿ. ಶಿವಮೂರ್ತಿ ಶಾಸ್ತ್ರಿ ಅವರು ಸಂಪಾದಿಸಿರುವ ಕವಿ ಲಕ್ಷ್ಮೀಶ ಅವರು ರಚಿಸಿರುವ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಯಜ್ಞಾಶ್ವದ ನೆತ್ತಿಯಲ್ಲಿ ಎದ್ದು ಕಾಣುತ್ತಿದ್ದ ಪಟ್ಟ ಲಿಖಿತದಲ್ಲಿ ಈ ಮಾತುಗಳನ್ನು ಬರೆಯಲಾಗಿತ್ತು.
**ಸ್ವಾರಸ್ಯ:** "ಕೌಸಲ್ಯೆಯ ಪುತ್ರನಾದ ಶ್ರೀರಾಮನೊಬ್ಬನೇ ಭೂಮಂಡಲದಲ್ಲಿ ವೀರನು" ಎನ್ನುವ ಪಟ್ಟ ಲಿಖಿತವು ಶ್ರೀರಾಮನ ಶೌರ್ಯಸಾಹಸಗಳನ್ನು ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1X4=4**

39. ಕಲುಷಿತವಾದೀ ನದಿಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**ಅಥವಾ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ
ಕಣ್ಣೊಳು ನಾಳಿನ ಕನಸನು ಬಿತ್ತೋಣ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1X4=4**

**40. ಬೆಳ್ಳಿಯಹಳ್ಳಿಯ ಮೇರೆಯ ಮೀರಿ**
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

**ಆಯ್ಕೆ :** ವರಕವಿ ದ. ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಲಾಗಿದೆ.
**ಸಾರಾಂಶ :** ಕಾಲದ ಓಟದಲ್ಲಿ ಅಂದರೆ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿ ಆಗಬಹುದು. ಚಂದ್ರಲೋಕವು ಬರಿ ಊರು ಆಗಬಹುದು ಹಾಗೂ ಮಂಗಳ ಲೋಕವು ಭೂಮಿಗೆ ಅಂಗಳ ಆಗಬಹುದು. ಮಾನವನಿಗೆ ಈ ಆಕಾಶಕಾಯಗಳು ಆಡಲು, ಹಾಡಲು ಹಾಗೂ ಹಾರಾಡಲು ವೇದಿಕೆ ಆಗಬಹುದು.
**ಮೌಲ್ಯ :** ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ ಈ ನುಡಿಯಲ್ಲಿ ಅಭಿವ್ಯಕ್ತವಾಗಿದೆ. ಕವಿಯು ಕಂಡ ಭವಿಷ್ಯತ್ತಿನ ವೈಜ್ಞಾನಿಕ ದೃಷ್ಟಿಕೋನವು ಹಾಗೂ ಮಾನವನಲ್ಲಿರುವ ಅದಮ್ಯವಾದ ಬುದ್ಧಿಶಕ್ತಿಯು ಇಲ್ಲಿ ಅಭಿವ್ಯಕ್ತಗೊಂಡಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2X4=8**

**41. ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯರು ಧರ್ಮಾಧಿಕರಣರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.**
ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿ ಇಬ್ಬರು ವ್ಯಾಪಾರದಿಂದ ಬಹಳಷ್ಟು ಹೊನ್ನನ್ನು ಸಂಪಾದಿಸಿಕೊಂಡು ಹಿಂದಿರುಗುವಾಗ ಊರ ಹೊರಗಿನ ಉದ್ಯಾನವನದಲ್ಲಿ ಉಳಿದುಕೊಂಡಿದ್ದರು. ಮಧ್ಯರಾತ್ರಿಯಲ್ಲಿ ಧರ್ಮಬುದ್ಧಿ ದುಷ್ಟಬುದ್ಧಿಯನ್ನು ಕರೆದು 'ನಾವಿಬ್ಬರೂ ಈ ಹೊನ್ನನ್ನು ಹಂಚಿಕೊಳ್ಳೋಣ' ಎಂದಾಗ 'ನಾವಿಬ್ಬರೂ ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿಯೇ ಇರುವವರಲ್ಲ. ಪುನಃ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದ ಹೊನ್ನನ್ನು ಈ ವಟವೃಕ್ಷದ ಬಳಿಯಲ್ಲಿಯೇ ಹೂತಿಡೋಣ' ಎಂದು ದುಷ್ಟಬುದ್ಧಿ ಸಲಹೆ ನೀಡುತ್ತಾನೆ. ಅದರಂತೆಯೇ ಮಾಡುತ್ತಾರೆ. ಮರುದಿನ ಇಬ್ಬರೂ ನಗರಕ್ಕೆ ಬಂದು ಸುಖವಾಗಿರುತ್ತಾರೆ. ಒಂದು ದಿನ ದುಷ್ಟಬುದ್ಧಿ ಹೂತಿಟ್ಟ ಹೊನ್ನನ್ನೆಲ್ಲ ತಾನೇ ಕದ್ದುಕೊಂಡು, ನಂತರ ಧರ್ಮಬುದ್ಧಿಯ ಬಳಿ ಬಂದು ಖರ್ಚಿಗೆ ಇನ್ನಷ್ಟು ಹೊನ್ನು ಬೇಕಾಗಿದೆ. ತರೋಣ ಎಂದು ಕರೆದುಕೊಂಡು ಹೋಗುತ್ತಾನೆ. ಆದರೆ ಅಲ್ಲಿ ಹೊನ್ನಿಲ್ಲದ್ದನ್ನು ಕಂಡು ತನ್ನ ಮೇಲೆ ಆರೋಪ ಬರುತ್ತದೆ ಎಂದು 'ನೀನೆ ಹೊನ್ನನ್ನೆಲ್ಲ ಕದ್ದಿರುವೆ' ಎಂದು ಧರ್ಮಬುದ್ಧಿಯ ಮೇಲೆಯೇ ಕಳ್ಳತನದ ಆರೋಪವನ್ನು ಹೊರಿಸುತ್ತಾನೆ. "ಕಳ್ಳರಿಗೆ ಸುಳ್ಳೇ ಬಲ' ಎಂಬಂತೆ ಕುಟಿಲ

ಮನಸ್ಸನ್ನು ಹೊಂದಿದ್ದ ದುಷ್ಟಬುದ್ಧಿ ಮತಿಗೆಟ್ಟು ಧರ್ಮಬುದ್ಧಿಯ ಮೇಲೆ ಆರೋಪ ಹೊರಿಸಿ, 'ನಿನ್ನ ಸ್ನೇಹ ಮಾಡಿ ಕೆಟ್ಟು ಹೋದೆ ಹಾ!' ಎಂದು ಬೊಬ್ಬೆ ಹೊಡೆಯುತ್ತಾನೆ. ನನ್ನ ಸ್ನೇಹಕ್ಕೆ ದ್ರೋಹ ಮಾಡಿರುವೆ ಇದು ತೀರ್ಮಾನವಾಗಲೇಬೇಕು ಎಂದು ಧರ್ಮಾಧಿಕರಣರ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ಹೇಳುತ್ತಾರೆ. ದುಷ್ಟಬುದ್ಧಿ ಧರ್ಮಾಧಿಕರಣರ ಬಳಿಯಲ್ಲಿ 'ಹೊನ್ನನ್ನು ಹೂತಿಡುವಾಗ ನಾನು ಮತ್ತು ಈತ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಧರ್ಮಬುದ್ಧಿಯೇ ಕದ್ದಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿ' ಎಂದು ಹೇಳುತ್ತಾನೆ. ಧರ್ಮಬುದ್ಧಿಗೆ ವಂಚಿಸಬೇಕು. ತನ್ನ ತಂದೆಯಿಂದ ಸುಳ್ಳು ಹೇಳಿಸಿ ಹೊನ್ನನ್ನೆಲ್ಲ ತಾನೇ ಇಟ್ಟುಕೊಳ್ಳಬೇಕು ಎಂದು ಪೂರ್ವನಿರ್ಧಾರ ಮಾಡಿಕೊಂಡಿದ್ದ ದುಷ್ಟಬುದ್ಧಿ ಧರ್ಮಬುದ್ಧಿಯನ್ನು ಧರ್ಮಾಧಿಕರಣರ ಬಳಿಗೆ ಕರೆದುಕೊಂಡು ಬರುತ್ತಾನೆ.

**ಅಥವಾ**

**ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.**
ದುಷ್ಟಬುದ್ಧಿ ಧರ್ಮಬುದ್ಧಿಗೆ ವಂಚಿಸಿ ಹೂತಿಟ್ಟ ಹೊನ್ನನ್ನೆಲ್ಲ ತಾನೇ ಕದ್ದುಕೊಂಡು ಧರ್ಮಬುದ್ಧಿಯ ಮೇಲೆ ಆರೋಪ ಮಾಡುತ್ತಾನೆ. ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿಗೆ ಬಂದ ಇಬ್ಬರೂ ನಡೆದ ಘಟನೆಯನ್ನು ತಿಳಿಸುತ್ತಾರೆ. ಹೊನ್ನನ್ನೆಲ್ಲ ಧರ್ಮಬುದ್ಧಿಯೇ ಕದ್ದುಕೊಂಡಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿ ಎಂದು ದುಷ್ಟಬುದ್ಧಿ ಹೇಳುತ್ತಾನೆ. ಈ ಧರ್ಮಾಧಿಕರಣರಿಗೆ ವಿಸ್ಮಯವಾಗುತ್ತದೆ. ಧರ್ಮಬುದ್ಧಿಗೆ ಈ ಸಾಕ್ಷಿಯನ್ನು ಸ್ವೀಕರಿಸಲು ಸೂಚಿಸುತ್ತಾರೆ. ಮನುಷ್ಯರ ಸುಕೃತ ದುಷ್ಕೃತಗಳು ದೇವರಿಗೆ ತಿಳಿದಿರುತ್ತವೆಯೆಂದು ಧರ್ಮಬುದ್ಧಿ ಸಾಕ್ಷಿಯನ್ನು ಒಪ್ಪುತ್ತಾನೆ. ಮರುದಿನ ಬೆಳಗ್ಗೆ ಸಾಕ್ಷಿ ಕೇಳಲು ಸಮಯ ನಿಗದಿಯಾಗುತ್ತದೆ. ಮನೆಗೆ ಬಂದ ದುಷ್ಟಬುದ್ಧಿ ತನ್ನ ತಂದೆಯನ್ನು ಸಾಕ್ಷಿ ಹೇಳುವಂತೆ ಒಪ್ಪಿಸಿ ರಾತ್ರಿಯೇ ಮರದ ಪೊಟರೆಯೊಳಗೆ ಕೂರಿಸಿ ಬರುತ್ತಾನೆ. ಮರುದಿನ ಸಾಕ್ಷಿ ಕೇಳಲು ಧರ್ಮಾಧಿಕರಣರು ಮರದ ಬಳಿಗೆ ಬಂದು ಅಷ್ಟವಿಧಾರ್ಚನೆ ಮಾಡಿ ಸತ್ಯವನ್ನೇ ಹೇಳಬೇಕು ಎಂದು ಮರವನ್ನು ಪ್ರಾರ್ಥಿಸುತ್ತಾರೆ. ಮರದ ಪೊಟರೆಯಲ್ಲಿ ಅಡಗಿದ್ದ ಪ್ರೇಮಮತಿ ಮತಿಗೆಟ್ಟು ಅಧರ್ಮದಿಂದ 'ಧರ್ಮಬುದ್ಧಿಯೇ ಹೊನ್ನನ್ನೆಲ್ಲ ಕದ್ದಿರುವನು' ಎಂದನು. ನೆರೆದ ಎಲ್ಲರಿಗೂ ಆಶ್ಚರ್ಯವಾಯಿತು. ದೇವರೇ ಆಗಿದ್ದರೆ ಸತ್ಯವನ್ನು ನುಡಿಯಬೇಕಿತ್ತು. ಇದರಲ್ಲಿ ಏನೋ ಮೋಸವಿದೆ ಎಂದು ಧರ್ಮಬುದ್ಧಿ ಮರವನ್ನು ಬಲವಂದು ಬಂದು ನೋಡಿದಾಗ ಮರದಲ್ಲಿನ ದೊಡ್ಡ ಪೊಟರೆ, ಅದರ ಬಳಿಯಲ್ಲಿ ಮನುಷ್ಯ ಸಂಚಾರವಾಗಿರುವುದನ್ನು ಗಮನಿಸುತ್ತಾನೆ. 'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂಬಂತೆ ಧರ್ಮಾಧಿಕರಣರನ್ನು ಕುರಿತು 'ಹುಸಿಯದ ಬೇಹಾರಿಯೇ ಇಲ್ಲ'. ನಾನು ಹೊನ್ನನ್ನು ಕದ್ದುಕೊಂಡು ಹೋಗಲು ಬಂದಾಗ ಸೂರ್ಯೋದಯವಾಯಿತು. ವಿಧಿಯಿಲ್ಲದೆ ಇದೇ ಮರದ ಪೊಟರೆಯೊಳಗೆ ಇಟ್ಟಿದ್ದೆ. ಮರುದಿನ ಬಂದು ನೋಡಿದಾಗ ಹೊನ್ನನ್ನು ಸರ್ಪವೊಂದು ಸುತ್ತಿಕೊಂಡಿತ್ತು. ತೆಗೆದುಕೊಳ್ಳಲಾಗದೆ ಇಲ್ಲಿಯೇ ಬಿಟ್ಟಿದ್ದೇನೆ. ಈಗ ನಿಮ್ಮೆಲ್ಲರ ಎದುರಿನಲ್ಲಿ ಪೊಟರೆಯೊಳಗೆ ಹೊಗೆ ಹಾಕಿ. ಹಾವನ್ನು ಓಡಿಸಿ, ಕದ್ದಿರುವ ಹೊನ್ನನ್ನು ತೆಗೆದುಕೊಡುತ್ತೇನೆ' ಎಂದು ಅಲ್ಲಿದ್ದ ಹುಲ್ಲು, ಸೌದೆಗಳನ್ನು ಪೊಟರೆಯೊಳಕ್ಕೆ ಹಾಕಿ ದುಷ್ಟಬುದ್ಧಿಯ ಮನೆಗೆ ಬೆಂಕಿ ಇಟ್ಟಂತೆ ಬೆಂಕಿ ಹಾಕಿದನು. ಅದರಲ್ಲಿ ಅಡಗಿದ್ದ ಪ್ರೇಮಮತಿ ಉಸಿರುಗಟ್ಟಿ ಉರುಳಿ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ತಂದೆಯನ್ನು ಕಂಡ ಧರ್ಮಾಧಿಕರಣರು ಇಂತಹ ದುಷ್ಟಪುತ್ರನಿಂದ ನಿನಗೆ ಈ ದುರ್ಮರಣ ಬಂದಿತು ಎನ್ನುತ್ತಾರೆ. ಹೀಗೆ ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗುಬಾಣವಾಯಿತು.

**42. ಹಲಗಲಿ ದಂಗೆಗೆ ಕಾರಣವೇನು? ಕುಂಪಣಿ ಸರ್ಕಾರ ದಂಗೆಯನ್ನು ನಿಯಂತ್ರಿಸಿದ ಬಗೆಯನ್ನು ವಿವರಿಸಿ.**
ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರದ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಭೀಮ, ಜಡಗರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು, ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು. ಹಲಗಲಿಯ ಬೇಡರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ, ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು, ಸಿಪಾಯಿಗಳನ್ನು ಹೊಡೆದುರುಳಿಸಿದರು. ಇದರಿಂದ ಬ್ರಿಟಿಷ್ ಅಧಿಕಾರಿಯು ಬಹುಕೋಪಗೊಂಡು ಹಲಗಲಿಯ ಮೇಲೆ ದಾಳಿ ಮಾಡುವಂತೆ ಅಶ್ವದಳ ಸೈನಿಕರಿಗೆ ಆದೇಶ ಮಾಡುತ್ತಾನೆ. ಅಶ್ವದಳ ಸೈನಿಕರು ಒಟ್ಟಾಗಿ ಹಲಗಲಿಗೆ ಬಂದು, ದಾಳಿ ಮಾಡತೊಡಗಿದಾಗ ಊರಿನ ಒಳಗಿದ್ದ ಬೇಡರು ಅಶ್ವದಳ ಸೈನಿಕರ ಮೇಲೆ ಮುಂಗಾರಿನ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಗರೆಯುತ್ತಾರೆ. ಇದರಿಂದ ಗಾಬರಿಗೊಂಡ ಅಶ್ವದಳ ಸೈನಿಕರು ಹಿಂದೆ ಸರಿದು, ದಂಡನ್ನು ಕಳುಹಿಸುವಂತೆ ಮೇಲಧಿಕಾರಿಗಳಿಗೆ ಕಾಗದ ಬರೆಯುತ್ತಾರೆ. ದಂಗೆ ಎದ್ದ ಹಲಗಲಿಯ ಬೇಡರನ್ನು ಬ್ರಿಟಿಷರ ದಂಡಿನ ಸಿಪಾಯಿಗಳು ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಆಗ ಹಲಗಲಿಯ ವೀರರೆಲ್ಲರೂ ಬ್ರಿಟಿಷ್ ಸಿಪಾಯಿಗಳ ವಿರುದ್ಧ ಹೋರಾಡಿ

ವೀರಮರಣವನ್ನು ಅಪ್ಪಿದರು. ಸಿಪಾಯಿಗಳು ಹಲಗಲಿಯನ್ನು ಲೂಟಿ ಮಾಡಿ. ಊರಿಗೆ ಬೆಂಕಿ ಹಚ್ಚಿದ್ದರಿಂದ ಹಲಗಲಿ ಗುರುತು ಸಿಕ್ಕದಂತೆ ಸುಟ್ಟು ಹೋಯಿತು.

**ಅಥವಾ**

**ಹಲಗಲಿಯ ಮೇಲೆ ದಂಡು ಹೇಗೆ ದಾಳಿ ಮಾಡಿತು? ದಾಳಿಯ ಪರಿಣಾಮಗಳೇನು?**

ಹಲಗಲಿಯ ಬೇಡರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ, ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ. ಹೊಡೆದು. ಸಿಪಾಯಿಗಳನ್ನು ಹೊಡೆದುರುಳಿಸಿದರು. ಇದರಿಂದ ಬ್ರಿಟಿಷ್ ಅಧಿಕಾರಿಯು ಬಹುಕೋಪಗೊಂಡು ಹಲಗಲಿಯ ಮೇಲೆ ದಾಳಿ ಮಾಡುವಂತೆ ಅಶ್ವದಳ ಸೈನಿಕರಿಗೆ ಆದೇಶ ಮಾಡುತ್ತಾನೆ. ಅಶ್ವದಳ ಸೈನಿಕರು ಒಟ್ಟಾಗಿ ಹಲಗಲಿಗೆ ಬಂದು, ದಾಳಿ ಮಾಡತೊಡಗಿದಾಗ ಊರಿನ ಒಳಗಿದ್ದ ಬೇಡರು ಅಶ್ವದಳ ಸೈನಿಕರ ಮೇಲೆ ಮುಂಗಾರಿನ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಗರೆಯುತ್ತಾರೆ. ಇದರಿಂದ ಗಾಬರಿಗೊಂಡ ಅಶ್ವದಳ ಸೈನಿಕರು ಹಿಂದೆ ಸರಿದು, ದಂಡನ್ನು ಕಳುಹಿಸುವಂತೆ ಮೇಲಧಿಕಾರಿಗಳಿಗೆ ಕಾಗದ ಬರೆಯುತ್ತಾರೆ. ದಂಗೆ ಎದ್ದ ಹಲಗಲಿಯ ಬೇಡರನ್ನು ಬ್ರಿಟಿಷರ ದಂಡಿನ ಸಿಪಾಯಿಗಳು ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಆಗ ಹಲಗಲಿಯ ವೀರರೆಲ್ಲರೂ ಬ್ರಿಟಿಷ್ ಸಿಪಾಯಿಗಳ ವಿರುದ್ಧ ಹೋರಾಡಿ ವೀರಮರಣವನ್ನು ಅಪ್ಪಿದರು. ಸಿಪಾಯಿಗಳು ಹಲಗಲಿಯನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಹಚ್ಚಿದ್ದರಿಂದ ಹಲಗಲಿ ಗುರುತು ಸಿಕ್ಕದಂತೆ ಸುಟ್ಟು ಹೋಯಿತು. ಬ್ರಿಟಿಷ್ ಸೈನಿಕರು ಕೊಡಲಿ, ಕೋರೆ, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಹರಿಶಿನ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ಚರಿಗೆ, ಮಂಗಳಸೂತ್ರ ಎಲ್ಲವನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಇಟ್ಟು, ಬೂದಿ ಮಾಡಿದರು. ಹಲಗಲಿಯು ಗುರುತಿಸಲಾಗದಷ್ಟು ಸಂಪೂರ್ಣನಾಶವಾಯಿತು.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**
**1X4=4 (2+2)=4**

43. ದೇಶದ ಪ್ರಗತಿ, ಜನರ ಉದ್ಧಾರ ಅಸಿ, ಮಸಿ ಮತ್ತು ಕೃಷಿಯನ್ನು ಅವಲಂಬಿಸಿದೆ. ಅಸಿ ಎಂದರೆ ಯುದ್ಧ. ಯುದ್ಧ ಎಂದರೆ ಸೈನಿಕರು. ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಹಾಗೆಯೇ ರಕ್ಷಣೆಗಿಂತ ಮುಖ್ಯವಾದುದು ಮಸಿ. ಮಸಿ ಎಂದರೆ ಶಿಕ್ಷಣ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಇದೆ. ಅಸಿ, ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ನಮ್ಮ ನಾಡಿನ ಬೆನ್ನೆಲುಬು. 'ಒಕ್ಕಲಿಗ ಒಕ್ಕದಿರೆ, ಜಗವೆಲ್ಲ ಬಿಕ್ಕುವುದು' ಎನ್ನುವ ಮಾತಿದೆ ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿ ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹ

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಈ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಆದರೆ ಇಂದು ಕೃಷಿಕರ ಗತಿ ಏನಾಗಿದೆ ? ಅವನು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಕೃಷಿಕ ಹೋರಾಟ ನಡೆಸಬೇಕಾಗಿದೆ. ಆದರೂ ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚುತ್ತಿದ್ದಾರೆ.

**ಅ) ಇಂದು ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳಾವುವು?**

ಇಂದು ಕೃಷಿಕರು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಕೃಷಿಕ ಹೋರಾಟ ನಡೆಸಬೇಕಾಗಿದೆ.

**ಬ) ಸರ್ವಜ್ಞ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎನ್ನಲು ಕಾರಣವೇನು?**

ಅಸಿ. ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ನಾಡಿನ ಬೆನ್ನೆಲುಬು. 'ಒಕ್ಕಲಿಗ ಒಕ್ಕದಿರೆ; ಜಗವೆಲ್ಲ ಬಿಕ್ಕುವುದು' ಎನ್ನುವ ಮಾತಿದೆ. ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಕೆಯಿಂದ ಬದುಕಲು ಸಾಧ್ಯವಿಲ್ಲ. ನಾವು ಯಾವ ಕಾರ್ಖಾನೆಯಿಂದಲೂ ಟೊಮೊಟೊ, ಅಕ್ಕಿ, ರಾಗಿ ಬೆಳೆಯಲು ಸಾಧ್ಯವಿಲ್ಲ. ರೈತರು ಭೂಮಿಯಲ್ಲಿ ಬೆವರು ಸುರಿಸಿ,

ದುಡಿದು ಬೆಳೆಯನ್ನು ಬೆಳೆದರೆ ಮಾತ್ರ ನಮಗೆ ಬೇಕಾದ ಆಹಾರ ದೊರೆಯುತ್ತದೆ. ಆದ್ದರಿಂದ ಸರ್ವಜ್ಞನು 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂದು ಹೇಳಿದನು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1X5=5**

**44. ನಿಮ್ಮನ್ನು ಹಂಪಾಪುರದ ನಿವಾಸಿ 'ಪೂರ್ಣ' ಎಂದು ಭಾವಿಸಿಕೊಂಡು, ಮೈಸೂರಿನ 'ಕೃಷ್ಣರಾಜೇಂದ್ರ ಮೃಗಾಲಯ'ದ ಭೇಟಿಗೆ ಸಮಯಾವಾಕಾಶವನ್ನು ಕೋರಿ ಮೃಗಾಲಯದ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.**

ಇಂದ
ಪೂರ್ಣ
10 ನೆಯ ತರಗತಿ
ಹಂಪಾಪುರ

ದಿನಾಂಕ: 26-02-2024
ಸ್ಥಳ : ಹಂಪಾಪುರ

ಇವರಿಗೆ

ಮಾನ್ಯ ವ್ಯವಸ್ಥಾಪಕರು
ಕೃಷ್ಣರಾಜೇಂದ್ರ ಮೃಗಾಲಯ
ಮೈಸೂರು

ಮಾನ್ಯರೇ,

ವಿಷಯ : ಕೃಷ್ಣರಾಜೇಂದ್ರ ಮೃಗಾಲಯದ ಭೇಟಿಗೆ ಸಮಯಾವಕಾಶವನ್ನು ಕೋರಿ ಮನವಿ.

ನಮ್ಮ ಹಂಪಾಪುರದ ಪ್ರೌಢಶಾಲೆಯಿಂದ ಶೈಕ್ಷಣಿಕ ಪ್ರವಾಸ ಮಾಡುವ ಉದ್ದೇಶದಿಂದ ಪ್ರವಾಸಕ್ಕೆ ಮೈಸೂರಿಗೆ ಬರಲು ಬಯಸಿರುತ್ತೇವೆ. ನಾವು ಮೈಸೂರಿಗೆ ಪ್ರವಾಸಕ್ಕೆ ಬಂದ ಸಂದರ್ಭದಲ್ಲಿ ಕೃಷ್ಣರಾಜೇಂದ್ರ ಮೃಗಾಲಯವನ್ನು ಭೇಟಿ ಮಾಡಲು ಬಯಸಿದ್ದೇವೆ. ನಮಗೆ ಮೃಗಾಲಯವು ಯಾವ ಸಮಯದಲ್ಲಿ ತೆರೆದಿರುತ್ತದೆ ಹಾಗೂ ಯಾವ ದಿನ ರಜೆ ಇರುತ್ತದೆ ಎಂದು ತಿಳಿದಿರುವುದಿಲ್ಲ. ಆದ್ದರಿಂದ ತಾವು ನಮಗೆ ಕೃಷ್ಣರಾಜೇಂದ್ರ ಮೃಗಾಲಯದ ಭೇಟಿಗೆ ಸಮಯಾವಕಾಶವನ್ನು ನೀಡಿ, ಅನುಮತಿಯನ್ನು ಕೊಟ್ಟರೆ; ಆ ಸಮಯಕ್ಕೆ ಹೊಂದಾಣಿಕೆ ಮಾಡಿಕೊಂಡು ಭೇಟಿ ನೀಡಲು ಸಹಾಯವಾಗುತ್ತದೆ. ನಾವು ನಿಮ್ಮ ಅನುಮತಿಯ ಪತ್ರಕ್ಕಾಗಿ ಕಾಯುತ್ತಿದ್ದೇವೆ. ದಯವಿಟ್ಟು ಮೃಗಾಲಯದ ಭೇಟಿಗೆ ಸೂಕ್ತ ಸಮಯಾವಕಾಶವನ್ನು ಒದಗಿಸಿಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇವೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ

ತಮ್ಮ ನಂಬುಗೆಯ

ಸಹಿ
(ಪೂರ್ಣ)

ಹೊರವಿಳಾಸ

ಇಂದ.
ಪೂರ್ಣ
10 ನೆಯ ತರಗತಿ
ಹಂಪಾಪುರ

ಇವರಿಗೆ.
ಮಾನ್ಯ ವ್ಯವಸ್ಥಾಪಕರು
ಶ್ರೀಚಾಮರಾಜೇಂದ್ರ ಮೃಗಾಲಯ
ಮೈಸೂರು

**ಅಥವಾ**

ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ರಜನಿ' ಎಂದು ಭಾವಿಸಿಕೊಂಡು, 'ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಬಳ್ಳಾರಿಯ ನಿವಾಸಿಯಾದ 'ರತ್ನಮ್ಮ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು

ಕ್ಷೇಮ ಶ್ರೀ ದಿನಾಂಕ:26:02:2024

ರಜನಿ
10 ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ರಾಯಚೂರು

ಮಾತೃಶ್ರೀ ಅವರಿಗೆ ನಿಮ್ಮ ಪ್ರೀತಿಯ ಮಗಳು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನಾನು ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕೆಂದು ಬಯಸಿರುತ್ತೇನೆ. ಅದಕ್ಕಾಗಿ ಪ್ರತಿದಿನ ಬೆಳಗ್ಗೆ 5 ಗಂಟೆಗೆ ಎದ್ದು, ನಮ್ಮ ಶಾಲೆಯ ಗುರುಗಳು ಹಾಕಿಕೊಟ್ಟ ವೇಳಾಪಟ್ಟಿಯಂತೆ ಆಯಾಯ ದಿನದ ಪಾಠಗಳನ್ನು ಅಂದಂದೇ ವ್ಯಾಸಂಗ ಮಾಡುತ್ತಿದ್ದೇನೆ. ಪ್ರತಿ ಭಾನುವಾರದಂದು ಕಳೆದ ವರ್ಷದ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿಕೊಂಡು. ಅವುಗಳಿಗೆ ಉತ್ತರಿಸುತ್ತಿದ್ದೇನೆ. ತರಗತಿಯಲ್ಲಿ ಗುರುಗಳು ಪಾಠ ಮಾಡುವಾಗ ನನಗೆ ಅರ್ಥವಾಗದ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪಾಠವನ್ನು ಅರ್ಥೈಸಿಕೊಳ್ಳುತ್ತಿದ್ದೇನೆ. ಬಿಡುವಿನ ವೇಳೆಯಲ್ಲಿ ಗೆಳೆಯರೊಡನೆ ಪಾಠದ ಬಗ್ಗೆ ಚರ್ಚೆ ನಡೆಸುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ನಿಮ್ಮ ಅಭಿಲಾಷೆಯಂತೆ ನಾನು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತೇನೆ.

ಈ ಪತ್ರದಲ್ಲಿ ಇರಬಹುದಾದ ತಪ್ಪುಗಳಿಗೆ ಕ್ಷಮೆ ಇರಲಿ. ಎಲ್ಲ ವಿಷಯಕ್ಕೂ ಈ ಪತ್ರ ಕಂಡಕೂಡಲೇ ಪತ್ರ ಬರೆಯಿರಿ. ಮನೆಯಲ್ಲಿ ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸಿ.

ನಿಮ್ಮ ಪ್ರೀತಿಯ ಮಗಳು

ಸಹಿ
(ರಜನಿ)

ಹೊರ ವಿಳಾಸ

| ಇಂದ | ಇವರಿಗೆ |
|---|---|
| ರಜನಿ | ಶ್ರೀಮತಿ ರತ್ನಮ್ಮ |
| 10 ನೆಯ ತರಗತಿ | ಬಳ್ಳಾರಿ |
| ಸರ್ಕಾರಿ ಪ್ರೌಢಶಾಲೆ | ಬಳ್ಳಾರಿ ಜಿಲ್ಲೆ |
| ರಾಯಚೂರು | |

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1X5=5**

**45. ಸಾವಯುವ ಕೃಷಿಯ ಮಹತ್ವ**

**ಪೀಠಿಕೆ :-** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ಧತಿ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಸಾಧಕ ಬಾಧಕಗಳ ಬಗ್ಗೆ ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದಾರೆ. ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವಾಗಿ ಬಂದಿರುವುದೇ ಸಾವಯವ ಬೇಸಾಯ ಪದ್ಧತಿ.

**ವಿಷಯ ನಿರೂಪಣೆ :-** ಬೆಳೆಯ ಆವರ್ತನೆ. ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಬೇಸಾಯ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ ಅಂತಾರಾಷ್ಟ್ರೀಯ ಆಶ್ರಯ

ಸಂಘಟನೆಯು ಸಾವಯವ ಸಮಷ್ಟಿಯನ್ನು ರಚಿಸುವುದಕ್ಕಾಗಿ 1972 ರಲ್ಲಿ ಸ್ಥಾಪಿಸಲಾಗಿದೆ. ಸಾವಯವ 1930-1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು. ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ತ್ವಪೂರ್ಣ ಕೊಡುಗೆ ನೀಡುತ್ತದೆ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನುಬದ್ಧವಾಗಿ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು 'ಸಾವಯವ ಕೃಷಿ ಮಿಷನ್' ರಚಿಸಲಾಗಿದೆ.

**ಉಪಸಂಹಾರ :-** ಸಾವಯವ ವ್ಯವಸಾಯವು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಇಷ್ಟಲ್ಲದೆ ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ. ಆದ್ದರಿಂದ ಇದನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

**ಅಥವಾ**

**ರಾಷ್ಟ್ರೀಯ ಭಾವೈಕ್ಯ**

***ಪೀಠಿಕೆ*** : ಭಾರತವು ಒಂದು ಜಾತ್ಯತೀತ ರಾಷ್ಟ್ರ. ನಮ್ಮ ದೇಶವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿತವಾಗಿದೆ. ನಮ್ಮ ದೇಶದಲ್ಲಿ ಅನೇಕ ಧರ್ಮಗಳು, ಭಾಷೆಗಳು, ವೇಷಭೂಷಣಗಳು, ಆಹಾರ ಪದ್ಧತಿಗಳು, ಆಚರಣೆಗಳು, ಸಂಸ್ಕೃತಿಗಳು ಕಂಡುಬರುತ್ತವೆ. 'ವಿವಿಧತೆಯಲ್ಲಿ ಏಕತೆ' ಎಂಬುದು ನಮ್ಮ ದೇಶದ ಪರಂಪರೆಯಾಗಿದೆ.

**ವಿಷಯ ನಿರೂಪಣೆ** : ಈ ರೀತಿಯ ಬಹುಮುಖಿ ಸಂಸ್ಕೃತಿಯನ್ನುಳ್ಳ ಈ ದೇಶದಲ್ಲಿ ಏಕತೆಯನ್ನು ಮೂಡಿಸುವುದು ಸವಾಲಿನ ಕಾರ್ಯವಾಗಿದೆ. ಆದರೆ ನಮ್ಮ ಸಂಸ್ಕೃತಿಯ ಪರಮತ ಸಹಿಷ್ಣುತೆಯನ್ನು ವೇದಕಾಲದಿಂದಲೂ ಬೋಧಿಸಿಕೊಂಡು ಬಂದಿರುವುದರಿಂದ ಸಹಬಾಳ್ವೆ ಮಾಡುವುದು ಇಂದು ಎಲ್ಲರಿಗೂ ಸಾಧ್ಯವಾಗಿದೆ. 'ವಸುಧೈವ ಕುಟುಂಬಕಂ'. 'ಸರ್ವೇಜನಾಃ ಸುಖಿನೋ ಭವಂತು' ಎಂಬುದು ನಮ್ಮ ನಾಡಿನ ಧ್ಯೆಯವಾಗಿದೆ. ಆದರೂ ಅಲ್ಲಲ್ಲಿ ಭಿನ್ನತೆ ಮಾತುಗಳು ಆಗಾಗ್ಗೆ ಕೇಳಿಬಂದು, ದೇಶದ ಶಾಂತಿಯನ್ನು ಕದಡುವ ಕಾರ್ಯವನ್ನು ಮಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಧರ್ಮ ಧರ್ಮಗಳ ನಡುವೆ ಭೇದಭಾವನೆಯನ್ನು ತೋರುವುದು. ಜಾತಿಯ ಹೆಸರಿನಲ್ಲಿ ಮೇಲುಕೀಳು ಭಾವನೆಯನ್ನು ಮೂಡಿಸುವುದು. ಭಾಷೆಯಿಂದ ಜನರನ್ನು ವರ್ಗೀಕರಿಸುವುದು. ಮೊದಲಾದ ದುಷ್ಕೃತ್ಯಗಳನ್ನು ಕಾಣಬಹುದಾಗಿದೆ. ಇದರಿಂದ ಅಸಹಿಷ್ಣುತೆ ಮನೋಭಾವ ಜನರಲ್ಲಿ ಮೂಡುತ್ತದೆ. ಆದರೆ ನಾವು ಇವುಗಳನ್ನು ಹೋಗಲಾಡಿಸಲು ಕಂಕಣಬದ್ಧರಾಗಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಗಳ ಮೂಲಕ ಜನರನ್ನು ಜಾಗೃತಗೊಳಿಸಬೇಕು. ರಾಷ್ಟ್ರ, ರಾಷ್ಟ್ರಧ್ವಜ, ರಾಷ್ಟ್ರಗೀತೆಯ ಬಗ್ಗೆ ಅಭಿಮಾನ ಮೂಡಿಸಬೇಕು. 'ಎಲ್ಲ ಧರ್ಮಗಳ ಸಾರವು ಒಂದೇ' ಎಂಬುದನ್ನು ಅರಿತರೆ ಧಾರ್ಮಿಕ ಅಸಹಿಷ್ಣುತೆಗೆ ಅವಕಾಶ ಇರುವುದಿಲ್ಲ. 'ನಾವೆಲ್ಲರೂ ಭಾರತಮಾತೆಯ ಮಕ್ಕಳು' ಎಂಬ ಭಾವ ಮೂಡಿದಾಗ ಜಾತಿ, ಮತ, ಭಾಷೆಗಳ ಭೇದಭಾವಕ್ಕೆ ಅವಕಾಶ ಇರುವುದಿಲ್ಲ. ದೇಶಪ್ರೇಮವನ್ನು ಮನಮನದಲ್ಲೂ ಮೂಡಿಸಿಕೊಳ್ಳಬೇಕು. ರಾಷ್ಟ್ರೀಯ ಭಾವೈಕ್ಯತೆಗೆ ಭಂಗ ತರುವಂತಹ ದುಷ್ಟಶಕ್ತಿಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನುರೀತ್ಯ ಕ್ರಮಕೈಗೊಂಡು, ಉಗ್ರವಾದ ಶಿಕ್ಷೆಯನ್ನು ನೀಡಬೇಕು. ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವತ್ತ ನಮ್ಮ ನಡೆಯಿರಬೇಕು.

**ಉಪಸಂಹಾರ** : ಶಾಲಾಕಾಲೇಜುಗಳಲ್ಲಿ ರಾಷ್ಟ್ರೀಯ ಭಾವೈಕ್ಯವನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ನಡೆಯಿಸುವುದರ ಮೂಲಕ ಬಾಲಕರಲ್ಲಿ, ಯುವಕರಲ್ಲಿ ದೇಶಾಭಿಮಾನ ಮೂಡಿಸುವ ಕಾರ್ಯವನ್ನು ಮಾಡಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಯನ್ನು ವೈಭವದಿಂದ ನಡೆಸಬೇಕು. 'ನಾವೆಲ್ಲರೂ ಭಾರತೀಯರು; ನಾವೆಲ್ಲರೂ ಒಂದೇ' ಎಂಬ ಮನೋಭಾವದಿಂದ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವುದು ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

**************************